# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಕಂದಾಯ ಅಧಿಕಾರಿ ಮತ್ತು ನೋಡಲ್ ಅಧಿಕಾರಿ, ವಾರ್ಡ್-166, ಕರೀಸಂದ್ರ ಕಛೇರಿ, ಜಯನಗರ 7ನೇ ಬ್ಲಾಕ್, ಬೆಂ-**

**ದಿನಾಂಕ: 19-06-2021 ರಂದು ಬೆಳಗ್ಗೆ 11:30 ಗಂಟೆಗೆ ವಾರ್ಡ್ ಸಂಖ್ಯೆ 166 ಕರೀಸಂದ್ರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ Ward Decentralized Triage and Emergency Response (DETER) Committee for COVID-19 Management (WDC) ಸಮಿತಿ ಸಭೆಯ ನಡುವಳಿಗಳು:**

**ಹಾಜರಿದ್ದವರು:**

1) ಶ್ರೀ ಆರ್.ಪಿ ರಾಥೋಡ್, ನೋಡಲ್ ಅಧಿಕಾರಿಗಳು
2) ಶ್ರೀ ಲಕ್ಷ್ಮಿಕಾಂತ್, ಮಾಜಿ ವಾರ್ಡ್ ಸದಸ್ಯರು, ಜನಪ್ರತಿನಿಧಿ
3) ಶ್ರೀ ಮಹಂತೇಶ್, ಕಾರ್ಯಪಾಲಕ ಅಭಿಯಂತರು(ಮೇಜರ್ ರೋಡ್ಸ್) ವಿಭಾಗ
4) ಶ್ರೀ ಯತೀಶ್, ಸಹಾಯಕ ಅಭಿಯಂತರರು
5) ಶ್ರೀ ಸುರೇಶ್- ಆರೋಗ್ಯ ವೈದ್ಯಾಧಿಕಾರಿಗಳು (ಪದ್ಮನಾಭನಗರ)
6) ಶ್ರೀ ಕಾರ್ತಿಕ್, ಕಿರಿಯ ಆರೋಗ್ಯ ಪರಿವೀಕ್ಷಕರು
7) ಶ್ರೀ ನರಸಿಂಹಲು, ಹಿರಿಯ ಆರೋಗ್ಯ ಪರಿವೀಕ್ಷಕರು
8) ಶ್ರೀ ಬಾಲಾಜಿ ಯಾದವ್, RWA ಪ್ರತಿನಿಧಿ
9) ಶ್ರೀ ಸುರೇಶ್ RWA ಪ್ರತಿನಿಧಿ

ವಾರ್ಡ್ ಸಮಿತಿ ನೋಡಲ್ ಅಧಿಕಾರಿಗಳು ಸಭೆಗೆ ಹಾಜರಿದ್ದ ಮಾಜಿ ವಾರ್ಡ್ ಸದಸ್ಯರಾದ ಶ್ರೀ ಲಕ್ಷ್ಮಿಕಾಂತ್‌ರವರಿಗೆ ಹಾಗೂ ಎಲ್ಲಾ ಸದಸ್ಯರುಗಳು ಹಾಗೂ ಅಧಿಕಾರಿ/ ನೌಕರರುಗಳಿಗೆ ಸ್ವಾಗತವನ್ನು ಕೋರುತ್ತಾ, ಸಭೆಯನ್ನು ಪ್ರಾರಂಭಿಸಿದರು ಹಾಗೂ ಈ ಹಿಂದಿನ ಸಭೆಯಲ್ಲಿ ಪ್ರಸ್ತಾಪವನ್ನು ವಾರ್ಡ ಕಾರ್ಯದರ್ಶಿಗಳು ವಿವರಿಸಿದ್ದು ಕೈಗೊಂಡಿರುವ ಕ್ರಮದ ಬಗ್ಗೆ ವಿಚಾರಿಸಲಾಗಿ ಕ್ರಮ ವಹಿಸಿರುವ ಬಗ್ಗೆ ಪರಿಶೀಲಿಸಲಾಗಿ, ಇದೇ ರೀತಿ ಹೆಚ್ಚಿನ ರೀತಿಯಲ್ಲಿ ಸಹಕರಿಸುವಂತೆ ಸೂಚಿಸಲಾಯಿತು.

ಮುಂದುವರೆದು, ವಾರ್ಡ್-166 ವ್ಯಾಪ್ತಿಯಲ್ಲಿ ಹಾಲಿ ಇರುವ COVID-19 ಪ್ರಕರಣಗಳ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರಿಂದ ವರದಿಯನ್ನು ಪಡೆಯಲಾಯಿತು. ಹಾಗೂ ವಾರ್ಡ್-166 ಕಂದಾಯ ಪರಿವೀಕ್ಷಕರು / ಕಂದಾಯ ವಸೂಲಿಗಾರರು & ಹಿರಿಯ ಆರೋಗ್ಯ ಪರಿವೀಕ್ಷಕರು Ward Decentralized Triage and Emergency Response (DETER) Committee for COVID-19 Management (WDC) ಸಮಿತಿ ಈ ಕೆಳಕಂಡಂತೆ ಕಾರ್ಯಗಳನ್ನು ಕೈಗೊಳ್ಳಲು ಸೂಚಿಸಿದರು.

(i) ವಾರ್ಡ್ ವ್ಯಾಪ್ತಿಯಲ್ಲಿನ ಜನಪ್ರತಿನಿಧಿಗಳು, ಪಾಲಿಕೆಯ ವಾರ್ಡ್ ಅಧಿಕಾರಿಗಳು, ವಾರ್ಡ್‌ಗೆ ಸಂಬಂಧಿಸಿದ ಇತರೆ ಇಲಾಖೆಯ ಅಧಿಕಾರಿಗಳು, (ಪಿ.ಹೆಚ್.ಸಿ, ಬಿ.ಎಲ್.ಓ ಒಳಗೊಂಡಂತೆ), RWA / Civil Society Organisation, NGO (Health Sector) ಹಾಗೂ

ಸರ್ಕಾರದೊಂದಿಗೆ ಕಾರ್ಯನಿರ್ವಹಿಸುತ್ತಿರುವ ಇತರೆ NGOಗಳು, ಸ್ಥಳೀಯ ಸಂಘಗಳನ್ನು ಒಳಗೊಂಡಂತೆ ಸದಸ್ಯ ಕಾರ್ಯದರ್ಶಿಗಳಾದ ಹಿರಿಯ ಆರೋಗ್ಯ ಪರಿವೀಕ್ಷಕರು WDC ತಂಡದ ಸದಸ್ಯರುಗಳನ್ನು ರಚಿಸುವ ಬಗ್ಗೆ ಆದೇಶವನ್ನು ಹೊರಡಿಸಲು ಅಗತ್ಯ ಕ್ರಮವಹಿಸುವುದು.

(ii) ವಾರ್ಡ್ ವ್ಯಾಪ್ತಿಯಲ್ಲಿ ಬರುವ_ಎಲ್ಲಾ RWA, ಅಪಾರ್ಟ್‌ಮೆಂಟ್ಸ್ ಅಸೋಷಿಯೇಷನ್, NGO's ಗಳನ್ನು ಹಾಗೂ ಕೊಳಗೇರಿಗಳು, ಎಸ್.ಸಿ/ಎಸ್.ಟಿ, ಮಂಗಳ ಮುಖಿಯರು ಸಂಪರ್ಕಿಸಲು ಸಂಬಂಧಪಟ್ಟ ವ್ಯಾಪ್ತಿಯಲ್ಲಿನ ಸ್ವಯಂ ಸೇವಕರುಗಳ ಸಹಕಾರದೊಂದಿಗೆ ಅಗತ್ಯ ಕ್ರಮವಹಿಸುವುದು.

**IEC ಚಟುವಟಿಕೆಗಳನ್ನು ಕೈಗೊಳ್ಳುವ ಬಗ್ಗೆ**

a. ವಾರ್ಡ್‌ನಲ್ಲಿರುವ ಪ್ರತಿ ನಾಗರೀಕರಿಗೂ ಸಹ ಮಾಸ್ಕ್ ಮತ್ತು ಸಾಮಾಜಿಕ ಅಂತರ, ಸೋಂಕಿನ ಲಕ್ಷಣಗಳು, ಪಲ್ಸ್ (ನಾಡಿ ಮಿಡಿತ) ಆಕ್ಸಿಮೀಟರ್ ಮತ್ತು ರೋಗದ ಸ್ಥಿತಿಯ ಬಗ್ಗೆ ಅರಿವು ಮೂಡಿಸುವುದು.

b. ಪ್ರತ್ಯೇಕ ಐಸೋಲೇಷನ್, ಕೋವಿಡ್ ಪರೀಕ್ಷೆ ಹೇಗೆ ಮಾಡಿಸಬೇಕು ಮತ್ತು ನಾಡಿ ಮಿಡಿತ (ಪಲ್ಸ್) ಆಕ್ಸಿಮೀಟರ್ ಮತ್ತು ಪೀಡಿತ ಸ್ಥಳಗಳ ಬಗೆಗಿನ ಪ್ರಾಮುಖ್ಯತೆಗಳನ್ನು ಸಾರ್ವಜನಿಕ ಪ್ರಕಟಣೆಗಳ ಮೂಲಕ ತಿಳಿಸುವುದು.

c. ಸಾಮಾನ್ಯ ನಾಗರೀಕರನ್ನು ಸಾರ್ವಜನಿಕರನ್ನು ತಲುಪಲು ಹೈಪರ್-ಲೋಕಲ್ ಸಾಮಾಜಿಕ ಮಾಧ್ಯಮವಾದ ವಾಟ್ಸ್‌ಅಪ್ ಗ್ರೂಪ್‌ಗಳನ್ನು ಬಳಸುವುದು, ಡಿಜಿಟಲ್ ಅಕ್ಷರತೆಯ ಅರಿವಿಲ್ಲದವರಿಗೂ ಸುದ್ದಿಯನ್ನು ತಲುಪಿಸುವ ಉದ್ದೇಶದಿಂದ ಸ್ವಯಂ ಸೇವಕರ ನೆಟ್‌ವರ್ಕ್‌ಗಳನ್ನು ಸ್ಥಾಪಿಸಬೇಕು.

d. ವಿವಿಧ ಭಾಷೆಗಳಲ್ಲಿ ಮುದ್ರಿತವಾದ ಐ.ಇ.ಸಿ. ಮಾರ್ಗಸೂಚಿಗಳನ್ನು ಎಲ್ಲಾ ದಿನಸಿ ಅಂಗಡಿಗಳಿಗೆ ವಿತರಿಸುವುದು. ಆರೋಗ್ಯ ವೈದ್ಯಾಧಿಕಾರಿ ಮತ್ತು ಆರೋಗ್ಯಾಧಿಕಾರಿ ರವರು ಆಶಾ ಕಾರ್ಯಕರ್ತರು ಹಾಗೂ ಬಿ.ಎಲ್.ಐ IEC ಚಟುವಟಿಕೆಗಳಲ್ಲಿ ತೊಡಗಿಸುವುದು.

ಮಾಜಿ ವಾರ್ಡ್ ಸದಸ್ಯರಾದ ಶ್ರೀ ಲಕ್ಷ್ಮಿಕಾಂತ್‌ರವರೊಂದಿಗೆ ಮಾತನಾಡಿ COVID-19 ಲಸಿಕಾ ಕೇಂದ್ರವನ್ನು ವಾರ್ಡ್ ಕಛೇರಿಯಲ್ಲಿ ನೂತನವಾಗಿ ನಿರ್ಮಿತ ಕಟ್ಟಡದಲ್ಲಿ ನಡೆಯುತ್ತಿದ್ದು, 18-44 ವರ್ಷ ಹಾಗೂ 45 ವರ್ಷಕ್ಕೂ ಮೇಲ್ಪಟ್ಟು ಜನರಿಗೆ ಲಸಿಕೆ ನೀಡುವುದನ್ನು ಈ ಹಿಂದಿನ ಸಭೆಯಲ್ಲಿ ಗುರುತಿಸಲಾಗಿರುವ ಕೆಳಕಂಡ ಸ್ಥಳಗಳಲ್ಲಿ ನಡೆಸುವುದು ಉಚಿತವಾಗಿ ಸಲಹೆ ನೀಡಿದರು.

- ಜಯನಗರ 7ನೇ ಬ್ಲಾಕ್ – ವಾರ್ಡ್-166ರ ಕಛೇರಿ
- ಕಾವೇರಿನಗರ – ಗಂಗಮ್ಮ ದೇವಸ್ಥಾನ
- ಹುಣಸೇಮರ ಜಂಕ್ಷನ್ – ಪಾಲಿಕೆಯ ಅಂಗನವಾಡಿ ಕಟ್ಟಡ
- ಬನಶಂಕರಿ 2ನೇ ಹಂತ – ಶ್ರೀ ಲಕ್ಷ್ಮಿ ವೇಂಕಟೇಶ್ವರ ಕಲ್ಯಾಣ ಮಂಟಪ

ಹಾಗೆಯೇ RWA ಪ್ರತಿನಿಧಿ ,ಶ್ರೀ ಬಾಲಾಜಿ ಯಾದವ್ ರವರು ಮಾತನಾಡಿ, ಒಂದು ಲಸಿಕಾ ಕೇಂದ್ರವನ್ನು " ಯಾದವ ಸಮುದಾಯ ಭವನ " ದಲ್ಲಿ ಹಮ್ಮಿಕೊಂಡಿದ್ದಲ್ಲಿ ಸುಮಾರು 09-ಚುನಾವಣಾ ಬೂತ್ ಒಳಗೊಂಡಂತೆ ಕಾವೇರಿನಗರ, ಡಾ॥ಅಂಬೇಡ್ಕರ್ ಕಾಲೋನಿ, ಮತ್ತು ಬನಶಂಕರಿ 2ನೇ ಹಂತ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಸ್ಥಳಿಯ ಸಾರ್ವಜನಿಕರಿಗೆ ಅರಿವು ಮೂಡಿಸುವುದರೊಂದಿಗೆ ಸ್ವಯಂ ಸೇವಕರನ್ನು ನೇಮಿಸಿಕೊಂಡು ಕಾರ್ಯನಿರ್ವಹಿಸುವುದಾಗಿ ಕೋರಿದರು.

**ಅಧ್ಯಕ್ಷರು ಮಾತನಾಡಿ, ಎಲ್ಲಾ ಅವಶ್ಯಕ ಮುನ್ನೆಚ್ಚರಿಕಾ ಕ್ರಮಗಳನ್ನು ಪಾಲಿಕೆ ವತಿಯಿಂದ ಕೈಗೊಂಡಿದ್ದರಿಂದ ಪ್ರಸ್ತುತ ಕೋವಿಡ್-19 ಪಾಸಿಟೀವ್ ಕೇಸ್‌ಗಳು ಕಡಿಮೆಯಾಗಿರುತ್ತದೆ ಎಂದು ತಿಳಿಸಿದರು.**

COVID-19 ಲಸಿಕಾ ಕೇಂದ್ರವನ್ನು ಮೇಲಿನ ಎಲ್ಲಾ ಸ್ಥಳಗಳಲ್ಲಿ ಅನುಕ್ರಮವಾಗಿ ಎಲ್ಲಾ ಪ್ರದೇಶಗಳನ್ನು ಒಳಗೊಂಡಂತೆ ಏಕ ಕಾಲದಲ್ಲಿ ನಿರ್ವಹಿಸುವುದು, ಸಾಧ್ಯವಾಗದೇ ಇದ್ದಲ್ಲಿ ಲಭ್ಯವಿರುವ ಲಸಿಕೆಯಂತೆ ಸದರಿ ಸ್ಥಳಗಳಲ್ಲಿ ಕೇಂದ್ರಗಳಲ್ಲಿ ಪಾಲಿಕೆಯ ಸಿಬ್ಬಂದಿ, ಅಂಗನವಾಡಿ ಸಿಬ್ಬಂದಿ, ಆಶಾ ಕಾರ್ಯಕರ್ತೆಯರ ಮತ್ತು ವಾರ್ಡ್‌ಗಳಿಗೆ ನಿಯೋಜಿಸಿರುವ ಬಿ.ಎಲ್.ಓಗಳು ಸ್ವಯಂ ಸೇವಕರು ಹಾಗೂ ಸಾಮಾನ್ಯ ವೈದ್ಯರುಗಳ ಸಹಾಕಾರದೊಂದಿಗೆ ಆಯೋಜಿಸಿ ಈ ಸಂಬಂಧ ಅಗತ್ಯ ಕ್ರಮಕೈಗೊಳ್ಳಲು ಆರೋಗ್ಯ ವೈದ್ಯಾಧಿಕಾರಿಗಳಿಗೆ ಹಾಗೂ ಬನಶಂಕರಿ ರೆಫರಲ್ ಹಾಸ್ಪಿಟಲ್ ವೈದ್ಯಾಧಿಕಾರಿಗಳಿಗೆ ಸೂಚಿಸಲಾಯಿತು.

**ಕಾಮಗಾರಿ ಇಲಾಖೆ :**

ಮಾಜಿ ವಾರ್ಡ್ ಸದಸ್ಯರಾದ ಶ್ರೀ ಲಕ್ಷ್ಮಿಕಾಂತ್‌ರವರೊಂದಿಗೆ ಮಾತನಾಡಿ ಕೆಳಕಂಡ ಸ್ಥಳಗಳಲ್ಲಿ ಕಾಮಗಾರಿಗಳ ಅವಶ್ಯಕತೆ ಇರುವುದಾಗಿ ವ್ಯಕ್ತಪಡಿಸಿದರು.

1. 5ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ ಜಂಕ್ಷನ್ SWD ಮಾಣಿಕ್ಯ ಅಪಾರ್ಟ್‌ಮೆಂಟ್ಸ್,
   5ನೇ ಮುಖ್ಯರಸ್ತೆ, 15ನೇ ಅಡ್ಡರಸ್ತೆ, ಎಸ್.ಎಲ್.ವಿ ಹತ್ತಿರ ;
   5ನೇ ಮುಖ್ಯರಸ್ತೆ, 17ನೇ ಡಿ ಅಡ್ಡರಸ್ತೆ ಜಂಕ್ಷನ್ ಬೆಂಗಳೂರು ಪ್ರೆಸ್.
2. ಜಯನಗರ 7ನೇ ಬ್ಲಾಕ್ ನಲ್ಲಿನ ಉದ್ಯಾನವನ್ನು ಸುತ್ತಲಿನ ಮಳೆ ನೀರಿನ ಚರಂಡಿಯ ಕಲ್ವರ್ಟ್ ಮಾಡಬೇಕೆಂದು ಹೇಳಿದರು.
3. ವಾರ್ಡ್ ವ್ಯಾಪ್ತಿಯಲ್ಲಿ ಪ್ರೊ. ವೆಂಕಟಸುಬ್ಬಯ್ಯ ಮತ್ತು ಅನಂತ್ ಕುಮಾರ್ ರವರ ಪ್ರತಿಮೆಗಳನ್ನು ಸ್ಥಾಪಿಸಲು ಕೋರಿದರು..

ಕ್ರಮ : ಕಾರ್ಯಪಾಲಕ ಅಭಿಯಂತರು( ಮೇಜರ್ ರೋಡ್ಸ್) ವಿಭಾಗ / ಸ.ಕಾ.ನಿ.ಅ(ಪದ್ಮನಾಭನಗರ) / ಸಹಾಯಕ ಅಭಿಯಂತರು ವಾರ್ಡ್-166

**ವಿದ್ಯುತ್ ಇಲಾಖೆ :**

1. ವಾರ್ಡ್ ವ್ಯಾಪ್ತಿಯ ಕೆಲವು ರಸ್ತೆಗಳಿಗೆ ಹೊಸ ರಸ್ತೆ ವಿದ್ಯುತ್ ದೀಪ ಅಳವಡಿಸಬೇಕೆಂದು ಕೋರಿದರು.
2. ವಾರ್ಡ್ ವ್ಯಾಪ್ತಿಯಲ್ಲಿ ಸುಮಾರು 25 ಸಂಖ್ಯೆ ಸಿ.ಸಿ.ಟಿ.ವಿ ಅಳವಡಿಸಬೇಕು ಎಂದು ತಿಳಿಸಿದರು.

ಕ್ರಮ : ಕಾರ್ಯಪಾಲಕ ಅಭಿಯಂತರು/ಸ.ಕಾ.ನಿ.ಅ(ವಿದ್ಯುತ್)ವಿಭಾಗ ದಕ್ಷಿಣ ವಲಯ

**ಘನತ್ಯಾಜ್ಯ :**

ಅಧ್ಯಕ್ಷರು ಹಾಗು ನೋಡಲ್ ಅಧಿಕಾರಿ ರವರು ಮಾತನಾಡಿ ವಾರ್ಡ್ ವ್ಯಾಪ್ತಿಯಲ್ಲಿ ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಪ್ರತಿನಿತ್ಯ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿರುತ್ತದೆ. ಲಾರಿ ಪಾಯಿಂಟ್ ಹಾಗೂ ಎಲ್ಲಾ ಘನತ್ಯಾಜ್ಯ ವಿಲೇವಾರಿ ಪಾಯಿಂಟ್ ಗಳಲ್ಲಿ ಬ್ಲೀಚಿಂಗ್ ಅಥವಾ ರೋಗ ನಿರೋಧಕವಾಗಿ ಸೋಡಿಯಂ ಹೈಪೋಕ್ಲೋರೈಡ್ ದ್ರಾವಣವನ್ನು ಸಿಂಪಡಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು.

ವಾರ್ಡ್ ವ್ಯಾಪ್ತಿಯಲ್ಲಿ COVID-19 ಪ್ರಕರಣಗಳನ್ನು ತಡೆಗಟ್ಟುವ ಸಂಬಂಧ ಎಲ್ಲಾ ಅಧಿಕಾರಿ ವೃಂದ ಹಾಗೂ RWA ಗಳು ಒಟ್ಟಾಗಿ ಪರಸ್ಪರ ಹೊಂದಾಣಿಕೆಯಿಂದ ಕಾರ್ಯನಿರ್ವಹಿಸಲು ಕೋರುತ್ತಾ, ಹಾಜರಿದ್ದ ಎಲ್ಲಾ ಸದಸ್ಯರಿಗೂ ವಂದಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಯತೀಶ್. ಎ.ಜಿ)
ಸಹಾಯಕ ಅಭಿಯಂತರು
ವಾರ್ಡ್ ಕಾರ್ಯದರ್ಶಿ ವಾರ್ಡ್-166, ಕರೀಸಂದ್ರ

(ಆರ್.ಪಿ [illegible])
ಕಂದಾಯ ಅಧಿಕಾರಿ
ನೋಡಲ್ ಅಧಿಕಾರಿ ವಾರ್ಡ್-166, ಕರೀಸಂದ್ರ